**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 11.06.2025**

**ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಎಸ್ ಎಂ ವಕೀಲರಿಂದಃ**

1. ನಾನು ಎಸ್ ಎಲ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಪ್ರಮಾಣಪತ್ರ ತಯಾರಿಸಲು ಮಾಹಿತಿಯನ್ನು ಯಾರು ಕೊಟ್ಟರೆಂದರೆ ಸಾಕ್ಷಿ ಮೂರನೇ ಪ್ರತಿವಾದಿ ಕೊಟ್ಟಿದ್ದಾರೆಂದು ಹೇಳುತ್ತಾರೆ. ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನಿಮಗೆ ತಿಳಿದಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ನಿಮಗೇನಾಗಬೇಕು ಎಂದರೆ ಸಾಕ್ಷಿ ಸಂಬಂಧಿಕರು ಎಂದು ಹೇಳುತ್ತಾರೆ. 2 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ಏನಾಗಬೇಕು ಎಂದರೆ ಸಾಕ್ಷಿ ಸಂಬಂಧ ಇಲ್ಲ ಜಮೀನನ್ನು ಅವರಿಂದ ಖರೀದಿ ಮಾಡಿದ್ದಾರೆಂದು ಹೇಳುತ್ತಾರೆ. ಕ್ರಂಸಯಪತ್ರವಾಗಿದೆ ಎನ್ನಲಾದ ವ್ಯವಹಾರಕ್ಕೆ ನೀವು ಭಾಗವಹಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲವೆಂದು ಹೇಳುತ್ತಾರೆ. ಕ್ರಯಪತ್ರಕ್ಕೆ ಸಾಕ್ಷೀದಾರರಾಗಿ ಹೋಗಿದ್ದೆ ಎಂದು ಹೇಳುತ್ತಾರೆ.

2. ಶೆಟ್ಟಿಗೌಡರಿಗೆ ಆ ಆಸ್ತಿ ಹೇಗೆ ಬಂತು ಎಂದು ನಾನು ತಿಳಿದುಕೊಂಡಿಲ್ಲ. ಆಸ್ತಿ ವಿಸ್ತೀರ್ಣ ಎಷ್ಟು ಎಂದರೆ ಸಾಕ್ಷಿ 25 ಗುಂಟೆ ಎಂದು ಹೇಳುತ್ತಾರೆ. 2016 ರಲ್ಲಿ ಗುಮ್ಮನಹಳ್ಳಿಯ ಗ್ರಾಮದ ಒಂದು ಗುಂಟೆ ಜಮೀನು ಎಷ್ಟು ಬೆಲೆ ಬಾಳುತ್ತಿತ್ತು ಎಂದು ಗೊತ್ತಿದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ನನಗೆ ಪರಿಚಯ ಇಲ್ಲ. 2

*ಮತ್ತು 3 ನೇ ಪ್ರತಿವಾದಿಗಳು ವಾದಿಗಳ ಆಸ್ತಿಗೆ ಕ್ರಯಪತ್ರ ಸೃಷ್ಟಿಸಿಕೊಂಡಿದ್ದ ದಾಖಲೆಗೆ ನೀವು ಮೂರನೇ ಪ್ರತಿವಾದಿಯ ಸಂಬಂಧಿಯಾಗಿರುವುದರಿಂದ ಸಾಕ್ಷಿಯಾಗಿ ಸಹಿ ಮಾಡಿರುತ್ತೀರಾ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ 1 ರ ಸ್ವಾಧೀನ ಯಾರ ಬಳಿ ಇದೆ ಎಂದರೆ ಸಾಕ್ಷಿ 3 ನೇ ಪ್ರತಿವಾದಿಯ ಸ್ವಾದೀನದಲ್ಲಿದೆ ಎಂದು ಹೇಳುತ್ತಾರೆ. ಯಾರು ಸ್ವಾಧೀನದಲ್ಲಿದ್ದಾರೆನ್ನುವ ಬಗ್ಗೆ ನಿಮಗೆ ಮಾಹಿತಿ ಇಲ್ಲದೆ ಇದ್ದರೂ ಸಹ 3 ನೆ ಪ್ರತಿವಾದಿ ನಿಮ್ಮ ಸಂಬಂಧಿಯಾಗಿರುವುದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ. ವಾದಿಗಳ ಭಾಗ ತಪ್ಪಿಸುವ ಉದ್ದೇಶದಿಂದ 3 ನೇ ಪ್ರತಿವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.*

***ಮರು ವಿಚಾರಣೆ ಇಲ್ಲ.***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***